ಇಟ್ಟುಕೊಳ್ಳಲು ಬಯಸುತ್ತಿರಲಿಲ್ಲ.

'ಎಲ್ಲಿಗಾದ್ರು ಹೋಗ್ತಿದ್ದೀರ?' ಉಮಾ ಕೇಳಿದ್ದರು.

'ಹೌದು, ಅಮ್ಮನ ಬಳಿಗೆ'

'ಭೂಪಾಲ್‌ಗೆ?'

'ಹೌದು!'

'ಎಲ್ಲಾ ಸರಿಯಿದೆ ತಾನೇ? ಹೀಗೆ ಅಕಸ್ಮಾತ್...?'

'ಅಮ್ಮನ ಆರೋಗ್ಯ ಸರಿ ಇಲ್ಲ'

'ಶರ್ಮಾರಿಗೆ ಗೊತ್ತಿದೆಯಾ?' ಅವರು ರಿತಿಕ್ ಬಗ್ಗೆ ಕೇಳಿದರು.

'ಹೂಂ, ಅವರಿಗೆ ಫೋನ್ ಮಾಡಿ ಹೇಳಿದ್ದೇನೆ, ಅವರೀಗ ನನ್ನ ಜೊತೆ ಬರಲಾಗುತ್ತಿಲ್ಲ, ಅವರೇ ನಾನು ಹೋಗಲು ಹೇಳಿದ್ದಾರೆ. ಅವರು ಕಚೇರಿಯ ನಂತರ ಸಂಜೆ ಹೊರಡ್ತಾರೆ'. ಒಬ್ಬ ಆಜ್ಞಾಕಾರಿ ಹೆಂಡತಿಯಂತೆ ಹಾಗೂ ನನ್ನನ್ನು ಕಾಣದೆ ರಿತಿಕ್‌ಗೆ ಆಘಾತವಾಗುತ್ತದೆ ಎಂಬಂತೆ ಉಮಾ ವರ್ಮಾ ಅವರಿಗೆ ನಾನೇ ಹೆಣೆದ ಕಥೆಯನ್ನು ಹೇಳಿದೆ. ಉಮಾ ಅವರು ನನ್ನ ಪರವಾಗಿ ಬೇರೆಯವರ ಜೊತೆಯಲ್ಲಿ ಜಗಳ ಸಹ ಮಾಡಿದ್ದರು. ಅವರಿಗೆ ಯಾರೋ, ನಾನು ಮದುವೆ ಮಾಡಿಕೊಳ್ಳದೆ ಇರುತ್ತಿರುವ ವಿಷಯವನ್ನು ಹೇಳಿದ್ದರು, ಆದರೆ ಅವರು ಇದನ್ನು ಒಪ್ಪಲು ಸಿದ್ಧರಿರಲಿಲ್ಲ. ಒಪ್ಪುವುದಾದರೂ ಹೇಗೆ? ನಾನು ಅವರ ಮನೆಗೆ ಹೋಗಿ ಕರವಾಚೌಥ್ ಪೂಜೆಯನ್ನು ಮಾಡಿದ್ದೆ! ನಾನು ಹೀಗೆ ಮೋಸ ಮಾಡಬಾರದಿತ್ತು. ಆದರೆ ನಿಜವನ್ನು ತಿಳಿದ ನಂತರವೂ ಅವರು ನನ್ನ ಪರ ವಹಿಸುತ್ತಿದ್ದರೆ? ನನ್ನ ಮನೆಯಿದ್ದ ಆ ಕಾಲೊನಿಯಲ್ಲಿ ನಾನು ಶಾಂತಿಯಿಂದಿರಬೇಕಿತ್ತು. ಶಾಂತಿಗಾಗಿ ಸ್ವಲ್ಪ ಪ್ರಮಾಣದ ಸುಳ್ಳು ಹೇಳುವುದು ದೊಡ್ಡ ಅಪರಾಧವಾಗಿರಲಿಲ್ಲ. ಸಮಾಜ ನನ್ನ ಮೇಲೆ ತಪ್ಪು ಹೊರಿಸಿದ್ದು, ನನಗೆ ಬೇಜಾರಾಗಿತ್ತು.

ಉಮಾ ಅವರಿಗೆ ನಾನು ಮನೆ ಬಿಟ್ಟು ಹೋದ ವಿಷಯ ತಿಳಿಯುತ್ತದೆ; ನಾನು ಅವರನ್ನು ಸದಾ ಅಂಧಕಾರದಲ್ಲಿಟ್ಟಿದ್ದೆ ಎಂಬ ವಿಷಯ ಸಹ ತಿಳಿಯುತ್ತದೆ; ಆಗ ಅವರಿಗೆ ತುಂಬಾ ದುಃಖವಾಗುತ್ತದೆ. ಅವರೆಂದೂ ನನ್ನನ್ನು ಕ್ಷಮಿಸಲಾರರು. ಏಕೆಂದರೆ ಅವರೆಂದೂ ನನ್ನನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಇಂಥ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ. ನಾನು ಉಮಾ ಅವರಿಗೆ ಮನೆಯ ಬೀಗದ ಕೈಯನ್ನು ಕೊಟ್ಟು ಹೊರಟು ಹೋದೆ. ಮೊದಲು ಕೀರ್ತಿಯನ್ನು ಭೇಟಿಯಾಗಿ ಎಲ್ಲವನ್ನೂ ಹೇಳಲು ನಿರ್ಧರಿಸಿದೆ. ನಾನು ಈ ಕೆಲಸವನ್ನು ಕೂಡಲೇ ಮಾಡಬೇಕಿತ್ತು, ಏಕೆಂದರೆ ನಾನು ರಾತ್ರಿಯಾಗುವುದಕ್ಕೂ ಮೊದಲೇ ಅಮ್ಮನ ಬಳಿಗೆ ಹೋಗಲು ಬಯಸುತ್ತಿದ್ದೆ. ಆದರೆ ನಾನು ತಲುಪುವಾಗ ಬೆಳಗಾಗುವುದು ನಿಶ್ಚಿತವಾಗಿತ್ತು.

ನಾನು ಕೀರ್ತಿಗೆ ಫೋನ್ ಮಾಡಿ ಅವಳನ್ನು ಕಚೇರಿಯ ಸಮೀಪವಿದ್ದ ಹೊಟೇಲ್‌ಗೆ ಕರೆಸಿಕೊಂಡೆ.

'ನಾನು ರಿತಿಕ್‌ನನ್ನು ಬಿಟ್ಟುಬಿಟ್ಟೆ' ಎಂದು ಕೀರ್ತಿಗೆ ಹೇಳಿದೆ.

'ಏಕೆ?'

'ಅದನ್ನೆಲ್ಲಾ ಆಮೇಲೆ ಹೇಳ್ತೀನಿ. ಆದರೆ ಈಗ ನಾನು ಆ ಮನೆಯನ್ನು ಶಾಶ್ವತವಾಗಿ ಬಿಟ್ಟೆ ಎಂದಷ್ಟೇ ಹೇಳಬಲ್ಲೆ. ನಾನೀಗ ಅಮ್ಮನ ಬಳಿಗೆ ಹೋಗ್ತಿದ್ದೇನೆ. ಸಿಕರವಾರರಿಗೆ ರಜಕ್ಕಾಗಿ ಫೋನ್ ಮಾಡಿದ್ದೇನೆ. ಅವರಿಗೆ ರಿತಿಕ್‌ನನ್ನು ತ್ಯಜಿಸಿದ ಬಗ್ಗೆ ಹೇಳಲಿಲ್ಲ, ಭೂಪಾಲ್‌ಗೆ ಹೋಗುತ್ತಿರುವುದಾಗಿ ಹೇಳಿದ್ದೇನೆ', ನಾನು ಒಂದೇ ಉಸುರಿಗೆ ಹೇಳಿದೆ.

'ಹೇಗೆ ಹೋಗ್ತಿದ್ದೀಯ?'

'ಕಾರಿನಲ್ಲಿ'

'ಒಂಟಿಯಾಗಿ?'

'ಇನ್ನು ಒಂಟಿಯಾಗಿಯೇ ಇರಬೇಕು'

'ನನ್ನ ಡ್ರೈವರ್‌ನನ್ನು ಕರ್ಕೊಂಡು ಹೋಗು. ಭೂಪಾಲ್ ತುಂಬಾ ದೂರವಿದೆ, ತುಂಬಾ ಆಯಾಸವಾಗುತ್ತೆ'

'ಇಲ್ಲ, ಆಯಾಸವಾಗಲ್ಲ. ಇನ್ನು ಜೀವನದ ಮಾರ್ಗವನ್ನು ಆಯಾಸವಿಲ್ಲದೆ ನಿಶ್ಚಯಿಸಬೇಕಿದೆ, ಅದೂ ಒಂಟಿಯಾಗಿ', ನಾನು ದಾರ್ಶನಿಕಳಂತೆ ಉತ್ತರಿಸಿದೆ.

'ಸರಿ, ಆದ್ರೆ ಭೂಪಾಲ್‌ಗೆ ಹೋಗುವಾಗ ಬೆಳಿಗ್ಗೆ ಆಗುತ್ತೆ, ಮಾರ್ಗ ಸಹ ಸರಿಯಿಲ್ಲ, ರಾತ್ರಿ ವೇಳೆಯಲ್ಲಿ ಒಬ್ಬೆ ಡ್ರೈವ್ ಮಾಡ್ಬೇಡ. ನಾನೀಗಲೇ ಸದಾಶಿವರೊಂದಿಗೆ ಮಾತಾಡ್ತೀನಿ, ಅವರು ಈಗ್ಲೇ ಡ್ರೈವರ್ ಕಳಿಸ್ತಾರೆ', ಹೀಗೆಂದು ಕೀರ್ತಿ ತನ್ನ ಪತಿಯ ನಂಬರಿಗೆ ಡಯಲ್ ಮಾಡಿದಳು. ಅವಳು ತನ್ನ ಪತಿಯನ್ನು ಅವರ ಹೆಸರಿನಿಂದಲೇ ಕರೆಯುತ್ತಿದ್ದಳು.

'ಹಲೋ, ನಾನು ಮಾತಾಡ್ತಾ ಇದ್ದೇನೆ. ಏನೆಂದ್ರೆ, ಸುಗಂಧಾ ಈಗ್ಲೇ ಭೂಪಾಲ್‌ಗೆ ಹೋಗಬೇಕೆಂದಿದ್ದಾಳೆ. ಅವಳು ತನ್ನ ಕಾರಿನಲ್ಲಿ ಹೋಗ್ತಿದ್ದಾಳೆ. ಹೌದು ಹೌದು, ಒಂಟಿಯಾಗಿ... ಅದಕ್ಕೇ ನಾನು ಹೇಳೋದೇನೆಂದ್ರೆ, ನೀವು ಡ್ರೈವರ್ ಕಳುಹಿಸಿ. ಹೂಂ... ಸರಿ...ಸರಿ, ಅದನ್ನೆಲ್ಲಾ ನಾನು ಆಮೇಲೆ ಹೇಳ್ತೀನಿ... ಅವನೇ ಸರಿ... ಹಾಂ, ಅವನಿಗೆ ಊಟದ ಖರ್ಚನ್ನು ಕೊಡಿ... ಹೂಂ, ಓಕೆ'.

ಕೀರ್ತಿ ಫೋನ್ ಕಟ್ ಮಾಡುವುದಕ್ಕೆ ಮೊದಲು, ಅವನಿಗೆ ನಾವಿದ್ದ ಹೊಟೇಲ್‌ನ ವಿಳಾಸವನ್ನು ಹೇಳಿದೆವು.

'ಹೂಂ, ಡ್ರೈವರ್ ಬರುವವನಿದ್ದಾನೆ. ಇನ್ನು ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ಇಲ್ಲಿಗೆ ಬರ್ತಾನೆ. ನೀನು ಬೇಕಾದ್ರೆ ಡ್ರೈವರನ್ನು ಮೂರ್ನಾಲ್ಕು ದಿನ ಉಳಿಸಿಕೊಂಡು ಕಳುಹಿಸು. ಅವನು ಉಳಿಯಲು ಬಯಸದಿದ್ದರೆ, ಅವನು ಬಸ್ ಅಥವಾ ರೈಲಿನಲ್ಲಿ ವಾಪಸ್ ಬರ್ತಾನೆ ಅಂತ ಸದಾಶಿವ್ ಹೇಳಿದರು. ಅವರು ಅವನಿಗೆ ದುಡ್ಡು ಕೊಟ್ಟು ಕಳುಹಿಸುತ್ತಿದ್ದಾರೆ, ನೀನು ಮತ್ತೆ ದುಡ್ಡು ಕೊಡ್ಬೇಡ', ಇದು ಕೀರ್ತಿಯ ನನ್ನ ಮೇಲಿನ ಇನ್ನೊಂದು ಕೃತಜ್ಞತೆಯಾಗಿತ್ತು.

'ಇದೆಲ್ಲಾ ಏಕಾಯ್ತು?' ಕೀರ್ತಿ ಕೇಳಿದಳು. ನಮ್ಮ ಬಳಿಡ್ರೈವರ್ ಬರುವವರೆಗೆ ಸಮಯಾವಕಾಶವಿತ್ತು. ನನಗೂ ಡ್ರೈವರನ್ನು ಕರೆದೊಯ್ಯುವುದು ಉಚಿತವೆಂದು ಅನ್ನಿಸಿತು. ರಾತ್ರಿ ವೇಳೆಯಲ್ಲಿ ಡ್ರೈವ್ ಮಾಡುವುದು ಬುದ್ಧಿವಂತಿಕೆಯಾಗಿರಲಿಲ್ಲ. ಮಾರ್ಗದ ಮಧ್ಯೆ ಕಾಡುಗಳು ಸಿಗುತ್ತವೆ, ರಸ್ತೆಗಳು ಸಹ ಶೂನ್ಯವಾಗಿರುತ್ತವೆ. ಮಾರ್ಗದಲ್ಲಿ ಕಾರು ಕೈಕೊಟ್ಟರೆ, ತುಂಬಾ ಕಷ್ಟವಾಗುತ್ತದೆ ಎಂದು ಯೋಚಿಸಿದೆ. ನಾನು ಕೀರ್ತಿಗೆ ಸಂಕ್ಷೇಪದಲ್ಲಿ ಎಲ್ಲಾ ಘಟನೆಗಳನ್ನು ಹೇಳಿದೆ.

'ಯಾರಾದ್ರು ನನ್ನನ್ನು 'ಇಟ್ಟುಕೊಂಡವಳು' ಎಂದರೆ ನನ್ನಿಂದ ಸಹಿಸಲು ಸಾಧ್ಯವಿಲ್ಲ', ಎಂದೆ.

'ನೀನು ಮಾಡ್ತಿರೋದು ಸರಿ. ಇಂಥ ಮನಸ್ತಾಪದ ಸಂಬಂಧದಿಂದ ಯಾವ ಸುಖವೂ ಇಲ್ಲ'. ಕೀರ್ತಿ ನಾನಿಟ್ಟ ಹೆಜ್ಜೆಯನ್ನು ಸಮರ್ಥಿಸುತ್ತಾ ಹೇಳಿದಳು, 'ನಿನ್ನಿಷ್ಟದಂತೆ ರಜವನ್ನು ಮುಂದುವರೆಸು, ನಾನು ಸಿಕರವಾರರಿಗೆ ಕನ್ವಿನ್ಸ್ ಮಾಡ್ತೀನಿ. ನೀನೇನೂ ಯೋಚ್ನೆ ಮಾಡಬೇಡ'.

ಕೀರ್ತಿಯ ಮಾತುಗಳು ನನಗೆ ಧೈರ್ಯವನ್ನು ಕೊಟ್ಟವು. ಡ್ರೈವರ್ ಬಂದೊಡನೆಯೇ ಕೀರ್ತಿ ನನ್ನನ್ನು ಬೀಳ್ಕೊಟ್ಟಳು. ಅವಳು ಮಾರ್ಗದ ಮಧ್ಯದಲ್ಲಿ ತಿನ್ನಲು ಬಿಸ್ಕತ್, ಚಿಪ್ಸ್ ಮತ್ತು ನೀರಿನ ಬಾಟಲಿಯನ್ನು ಸಹ ಕಾರಿನೊಳಗೆ ಇಟ್ಟಳು. ಕೀರ್ತಿ ಇಷ್ಟು ಜವಾಬ್ದಾರಿಯನ್ನು ವಹಿಸುತ್ತಾಳೆ ಎಂದು ಮೊದಲ ಬಾರಿಗೆ ನನ್ನ ಅನುಭವಕ್ಕೆ ಬಂತು. ತಾಯಿ ತನ್ನ ಮಗುವನ್ನು ಶಾಲೆಗೆ ಕಳುಹಿಸುತ್ತಿರುವಂತೆ ನನಗೆ ಭಾಸವಾಯಿತು. ಮಾರ್ಗದಲ್ಲಿ ಡ್ರೈವರ್‌ನೊಂದಿಗೆ ಹೆಚ್ಚು ಮಾತುಕತೆ ನಡೆಯಲಿಲ್ಲ. ನಾನು ನನ್ನ ಅತೀತ ಮತ್ತು ಭವಿಷ್ಯದ ಬಗ್ಗೆ ಯೋಚಿಸುತ್ತಿದ್ದೆ ಅಥವಾ ನಿದ್ರಿಸುತ್ತಿದ್ದೆ. ಮಾರ್ಗದ ಮಧ್ಯೆ ಒಂದು ಢಾಬಾದ ಬಳಿ ಕಾರು ನಿಲ್ಲಿಸಿ ಊಟ ಮಾಡಿದೆವು. ನಾನು ಬೆಳಿಗ್ಗೆಯಿಂದ ಏನೂ ತಿಂದಿರಲಿಲ್ಲ. ತಾನೂ ಊಟ ಮಾಡಿ ಬಂದಿಲ್ಲವೆಂದು ಡ್ರೈವರ್ ಹೇಳಿದ. ಅವನಿಗೆ ಅಕಸ್ಮಾತ್ ಅವನ ಮಾಲೀಕನ ಆದೇಶ ಬಂದಿತ್ತು, ಅವನು ತನ್ನ ಬಟ್ಟೆಗಳೊಂದಿಗೆ ಹೊರಟಿದ್ದ. ಕೀರ್ತಿ ಅವನಿಗೆ ಖರ್ಚು ಮಾಡಬೇಡವೆಂದು ಹೇಳಿದ್ದಳು. ಆದರೆ ನಾನು ಅವನ ಊಟದ ಬಿಲ್ ಚುಕ್ತಾ ಮಾಡಿದೆ. ನಾಲ್ಕು ಕಾಸಿನ ಆಸೆಗೆ ಅವನು ತಕ್ಷಣ ಹೊರಟು ಬಂದಿದ್ದ. ಅವನ ಒಂದು ಹೊತ್ತಿನ ಊಟದ ಖರ್ಚು ಉಳಿದರೆ, ಅವನಿಗೆ ಸಂತೋಷವಾಗುತ್ತದೆ.

ದೇವರು ನನಗೆ ಇನ್ನೊಬ್ಬರಿಗೆ ಎರಡು ಹೊತ್ತಿನ ಊಟ ಕೊಡುವಷ್ಟು ಸಾಮರ್ಥ್ಯವನ್ನು ಕರುಣಿಸಿದ್ದಾನೆ. ನಾನು ರಿತಿಕ್‌ಗೆ ತಿಂಡಿಊಟದ ವ್ಯವಸ್ಥೆಯನ್ನು ಸಹ ಮಾಡಿದ್ದೆ. ಅವನು ಮನೆಯ ಖರ್ಚಿಗೆ ಹಣ ಕೊಡುವುದನ್ನು ನಿಲ್ಲಿಸಿದ್ದ. ಮನೆಯ ದಿನಸಿಗಳನ್ನು ನಾನೇ ಕೊಂಡು ತರುತ್ತಿದ್ದೆ; ಅಲ್ಲದೆ ಅವನ ಮದ್ಯದ ಖರ್ಚನ್ನು ಸಹ ಭರಿಸುತ್ತಿದ್ದೆ. ಅವನು ಒಂದು ರೆಡಿಮೇಡ್ ಪೋರ್ಟಬಲ್ ಬಾರ್ ಖರೀದಿಸಿದ್ದು, ಅದನ್ನು ವರಾಂಡದ ಮೂಲೆಯಲ್ಲಿ ನಿಲ್ಲಿಸಲಾಗಿತ್ತು. ಅದರಲ್ಲಿ ರಿತಿಕ್‌ಗೆ ಇಷ್ಟವಾದ ಮದ್ಯದ ಬಾಟಲಿಗಳು ಇರುತ್ತಿದ್ದವು. ಅವನು ಕುಡಿಯುವುದಕ್ಕೆ ಮೊದಲು ಸ್ವಲ್ಪ ಹೊತ್ತು ಬಾಟಲಿಯನ್ನು ಚಿಲರ್ ಟ್ರೇನಲ್ಲಿಡುತ್ತಿದ್ದ. ನನಗೆ ಕ್ರಮೇಣ ಅವನ ಕುಡಿಯುವ ಗೀಳು ತಿಳಿಯಿತು. ನೀರುಳ್ಳಿಯ ಹೊರಗಿನ ಸಿಪ್ಪೆಯನ್ನು ನೋಡಿದಾಗ, ನೀರುಳ್ಳಿ ಹಾಳಾಗಿದೆಯೋ, ಇಲ್ಲವೋ ಎಂಬುದು ತಿಳಿಯುವುದಿಲ್ಲ. ಅದನ್ನು ಕತ್ತರಿಸಿದಾಗಲೇ, ಒಳಗಿನ ಭಾಗಗಳು ಸಹ ಹಾಳಾಗಿದೆ ಎಂದು